**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.627/2023**

**CW -9 PW-7**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಹನುಮಂತ್ರಾಯ |
| ತಂದೆ | ಃ | ತಿಮ್ಮಯ್ಯ |
| ವಯಸ್ಸು | ಃ | 48 |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಕಾಕರಗಲ್ |
| ಪ್ರಮಾಣಿಕರಿಸಿದ ದಿನಾಂಕ | ಃ | **22-01-2026** |

---

**<u>ಮುಖ್ಯ ವಿಚಾರಣೆ:-</u> ಮಾನ್ಯ ಸ.ಸ.ಅ ರವರಿಂದ**

ಈಗ 9 ವರ್ಷಗಳ ಹಿಂದೆ ರಮೇಶನಿಗೆ ಸೇರಿದ 150 ಕುರಿಗಳನ್ನು ಕಾಕರಗಲ್ ಸೀಮೆಯಲ್ಲಿ ಮುಷ್ಟೂರು ಕ್ರಾಸ ಬಳಿ ನಮ್ಮ ಹೊಲದಲ್ಲಿ ಇರಿಸಿದ್ದು ಅವುಗಳಲ್ಲಿ 22 ಕುರಿಗಳು ಮತ್ತು 2 ಟಗರುಗಳು ಕಳ್ಳತನವಾಗಿದ್ದು ಆ ವಿಷಯವನ್ನು ರಮೇಶ ನನಗೆ ತಿಳಿಸಿದ್ದು ಆಗ ನಾನು ಮತ್ತು ರಮೇಶ ಅಕ್ಕಪಕ್ಕ ಹುಡುಕಾಡಲು ಸಿಕ್ಕಿರುವುದಿಲ್ಲ ನಂತರ ಗಬ್ಬೂರು ಠಾಣೆಗೆ ಮಾಹಿತಿಯನ್ನು ನೀಡಿರುತ್ತೇವೆ. ಕಳುವಾದ ಮರುದಿನ ಸಾಯಂಕಾಲ ಪೊಲೀಸರು ನಮಗೆ ಪೋನ್ ಮಾಡಿ ಕಳುವಾದ ಕುರಿಗಳನ್ನು ವಡಗೇರಾ ಪೊಲೀಸರು ಹಿಡಿದಿರುತ್ತಾರೆ ಎಂದು ಮಾಹಿತಿ ನೀಡಿದ್ದು ಆಗ ನಾನು ಮತ್ತು ರಮೇಶ ವಡಗೇರಾ ಠಾಣೆಗೆ ಹೋಗಿ ಕುರಿಗಳನ್ನು ಮತ್ತು ಟಗರುಗಳನ್ನು ಗುರುತಿಸಿದ್ದು. ಅವುಗಳಲ್ಲಿ 20 ಕುರಿ ಮತ್ತು 1 ಟಗರು ಇದ್ದು ನಂತರ ನ್ಯಾಯಾಲಯದ ಆದೇಶದ ಮೇರೆಗೆ ಕುರಿಗಳನ್ನು ಬಿಡಿಸಿಕೊಂಡಿರುತ್ತೇವೆ. ಆ ಕುರಿತು ನಾನು ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲು**:-** ಆರೋಪಿತರ ಪರ ಶ್ರೀ**.** ವಿ**.**ಡಿ**.**ಸಿ ವಕೀಲರಿಂದ**.**

ಕಾಕರಗಲ್ ಗ್ರಾಮದಿಂದ ನನ್ನ ಜಮೀನು 1500 ಮೀಟರ್ ಹಂತರದಲ್ಲಿ ಇರುತ್ತದೆ. ಚಾಸಾ-1 ರಮೇಶ ಸಂಬಂಧಿಕನಾಗಿರುವುದಿಲ್ಲ ಕುಲಸ್ಥನಾಗಿರುತ್ತಾನೆ. ಸದರಿ ಕುರಿಗಳನ್ನು ಬೇಲಿ ಹಾಕಿ ನಿಲ್ಲಿಸಲಾಗಿತ್ತು. ಸದರಿ ಕುರಿಗಳು ಇದ್ದಲ್ಲಿ ನಾಯಿಗಳು ಇದ್ದವು. ಕಳ್ಳತನ ಆಗುವ ಸಂದರ್ಭದಲ್ಲಿ ನಾಯಿಗಳು ಬೊಗಳಿರುವ ವಿಚಾರ ನನಗೆ ಹೇಳಿರುವುದಿಲ್ಲ. ಸದರಿ ದಿನ ರಾತ್ರಿ ಮಳೆ ಬರುತ್ತಿತ್ತು ಎಂದು ನುಡಿಯುತ್ತಾರೆ. ಕುರಿ ದೊಡ್ಡಿ ಹತ್ತಿರ ರಮೇಶ ಮತ್ತು ಆತನ ಹೆಂಡತಿ ಇದ್ದರು. ವಡಗೇರಾ ಪೊಲೀಸರು ಮತ್ತು ಕುರಿ ಮಾಲೀಕರ ಸಂಬಂಧಿಕರು ಕುರಿ ಸಿಕ್ಕ ಬಗ್ಗೆ ತಿಳಿಸಿರುತ್ತಾರೆ.

ಗಬ್ಬೂರಿನ ಪಿ.ಎಸ್.ಐ ರವರು ನನ್ನನ್ನು ಮತ್ತು ರಮೇಶ ನನ್ನು ವಡಗೇರಾ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ವಡಗೇರಾ ಠಾಣೆಯಲ್ಲಿ 19 ಕುರಿಗಳು ಇದ್ದವು. ಸದರಿ ಕುರಿಗಳು ರಮೇಶನಿಗೆ ಸೇರಿದ ಕುರಿಗಳಾಗಿದ್ದವು. ಗಬ್ಬೂರು ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ರಮೇಶ ನನ್ನ ಸಂಬಂಧಿಕನಾದ್ದರಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳುನಿಂದ ಕೂಡಿರುತ್ತವೆ ಅಂದರೆ ಸರಿಯಲ್ಲ.

ಮರುವಿಚಾರಣೆ**:-** ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.